ಸೀತಾ ಬ್ಯಾಂಕ್
SEETHA BANK

RBI Lic. No: UBD/KAN/1564P

# ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ.

# SRI SEETHARAGHAVA SOUHARDA SAHAKARA BANK NIYAMITHA

## 28ನೇ ವಾರ್ಷಿಕ ವರದಿ 2025-26

ನಿಮ್ಮ ನಂಬಿಕೆಯೇ...
ನಮ್ಮ ವಿಶ್ವಾಸ...




ದಿನಾಂಕ : 23–07–2026 ಗುರುವಾರ
ಸ್ಥಳ : ಶ್ರೀ ಗಣೇಶ ಸದನ, ಹೊಸದುರ್ಗ



## ಶ್ರೀ ಹೆಚ್.ಎಸ್.ಶಿವಸ್ವಾಮಿ
**ಅಧ್ಯಕ್ಷರು**

| | | |
|---|---|---|
| ಅಧ್ಯಕ್ಷರು | : | ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ |
| ಅಧ್ಯಕ್ಷರು | : | ಶ್ರೀ ಗಣೇಶ ಸದನ ಟ್ರಸ್ಟ್ (ರಿ.), ಹೊಸದುರ್ಗ |
| ಗೌರವ ಅಧ್ಯಕ್ಷರು | : | ವರ್ತಕರ ಸಂಘ (ರಿ.), ಹೊಸದುರ್ಗ |
| ಅಧ್ಯಕ್ಷರು | : | ಮಹಾತ್ಮ ಗಾಂಧಿ ವಿದ್ಯಾ ಸಂಸ್ಥೆ (ರಿ.), ಹೊಸದುರ್ಗ |
| ಅಧ್ಯಕ್ಷರು | : | ಶ್ರೀ ಶಿರಡಿ ಸಾಯಿಬಾಬಾ ಟ್ರಸ್ಟ್ (ರಿ.), ಹೊಸದುರ್ಗ |
| ಅಧ್ಯಕ್ಷರು | : | ಶ್ರೀ ವಿನಾಯಕ ಸೇವಾ ಸಮಿತಿ (ರಿ), ಹೊಸದುರ್ಗ |

# 28ನೇ ಸರ್ವ ಸದಸ್ಯರ ಮಹಾಸಭೆಯ ನೋಟೀಸ್

ಮಾನ್ಯ ಸದಸ್ಯರೇ,

**2025–26 ನೇ ಸಾಲಿನ ಬ್ಯಾಂಕಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ: 23–07–2026 ನೇ ಗುರುವಾರ ಬೆಳಿಗ್ಗೆ 10.30 ಗಂಟೆಗೆ ಸರಿಯಾಗಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹೆಚ್.ಎಸ್.ಶಿವಸ್ವಾಮಿಯವರ ಘನ ಅಧ್ಯಕ್ಷತೆಯಲ್ಲಿ ನಗರದ ಬಸ್ ನಿಲ್ದಾಣದ ಬಳಿಯಿರುವ "ಶ್ರೀ ಗಣೇಶ ಸದನ" ಸಭಾಂಗಣದಲ್ಲಿ ಕರೆಯಲಾಗಿದೆ.**

**ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಲು ವಿನಂತಿಸುತ್ತೇವೆ.**

## ಸಭೆಯಲ್ಲಿ ಚರ್ಚಿಸುವ ವಿಷಯಗಳು

1. ಪ್ರಾರ್ಥನೆ ಹಾಗೂ ಸ್ವಾಗತ
2. 28ನೇ ಸಾಮಾನ್ಯ ಸಭೆಯ ನೋಟೀಸ್‌ನ್ನು ಓದಿ ದಾಖಲು ಮಾಡುವುದು.
3. 2025–26ನೇ ಸಾಲಿನಲ್ಲಿ ಮರಣ ಹೊಂದಿರುವ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚನೆ.
4. ಹಿಂದಿನ ಮಹಾಸಭೆಯ ನಡವಳಿಕೆಗಳನ್ನು ಓದಿ ಒಪ್ಪಿ ದೃಢೀಕರಿಸುವುದು.
5. ಕಳೆದ ಸಾಲಿನಲ್ಲಿ ಸೇರ್ಪಡೆಗೊಂಡ ಸದಸ್ಯರು ಹಾಗೂ ಸದಸ್ಯತ್ವದಿಂದ ವಿಮುಕ್ತಿ ಗೊಳಿಸಿದ ಸದಸ್ಯರ ವರದಿಯನ್ನು ಓದಿ ಒಪ್ಪಿ ಅಂಗೀಕರಿಸುವುದು.
6. 2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಪಾಲನಾ ವರದಿಯ ನಡವಳಿಕೆಗಳನ್ನು ಓದಿ ಒಪ್ಪಿ ಅಂಗೀಕರಿಸುವುದು.
7. 2025–26ನೇ ಸಾಲಿನ ಲಾಭ ಹಂಚಿಕೆ ಅನುಮೋದಿಸುವುದು.
8. ಕಳೆದ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್) ಗಿಂತಲು ಹೆಚ್ಚುವರಿ ಆಗಿರುವ ವೆಚ್ಚಕ್ಕೆ ಅನುಮೋದಿಸುವುದು.
9. 2026–27ನೇ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್)ವನ್ನು ಮಂಜೂರು ಮಾಡುವುದು.
10. 2026–27ನೇ ಸಾಲಿಗೆ ನಿರ್ದೇಶಕ ಮಂಡಲಿಯು ರೂಪಿಸಿದ ಯೋಜನೆ ಹಾಗೂ ವಾರ್ಷಿಕ ಕಾರ್ಯಕ್ರಮಗಳನ್ನು ಓದಿ ಒಪ್ಪಿ ಅನುಮೋದಿಸುವುದು.
11. 2026–27ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ದಿನಾಂಕ:24–04–2026ರಂದು ನಿರ್ದೇಶಕ ಮಂಡಲಿ ಸಭಾ ತೀರ್ಮಾನ ಸಂಖ್ಯೆ: 06 ರ ಅನ್ವಯ ನಿರ್ಣಯಿಸಿರುವುದನ್ನು ಅನುಮೋದಿಸುವ ವಿಚಾರ.
12. ದಿನಾಂಕ:14–02–2026ರಂದು ನಡೆದ ಚುನಾವಣೆಯಲ್ಲಿ ನೂತನ ಆಡಳಿತ ಮಂಡಲಿಯ ಸದಸ್ಯರು ಆಯ್ಕೆಯಾಗಿರುವುದನ್ನು ಅನುಮೋದಿಸುವ ವಿಚಾರ.
13. ಸೌಹಾರ್ದ ಸಹಕಾರಿ ಕಾಯ್ದೆ–24ರ ಅನ್ವಯ ಮತ್ತು ಬ್ಯಾಂಕಿನ ಉಪವಿಧಿ ಸಂಖ್ಯೆ–43(2)ರ ಅನ್ವಯ ಬ್ಯಾಂಕಿನ ನಿರ್ದೇಶಕ ಮಂಡಲಿಯಲ್ಲಿ ಖಾಲಿ ಇದ್ದ ವೃತ್ತಿಪರ ನಿರ್ದೇಶಕರನ್ನು ದಿನಾಂಕ:28–02–2026ರಂದು ನಡೆದ ನಿರ್ದೇಶಕ ಮಂಡಲಿ ಸಭಾ ತೀರ್ಮಾನ ಸಂಖ್ಯೆ 16ರ ಅನ್ವಯ ಆಯ್ಕೆ ಮಾಡಿಕೊಂಡಿರುವುದನ್ನು ಓದಿ ಒಪ್ಪಿ ಅನುಮೋದಿಸುವ ವಿಚಾರ.
14. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದ ಅನ್ವಯ ಹಾಗೂ ಬ್ಯಾಂಕಿನ ಬೈಲಾ(ಉಪವಿಧಿ) ಅನ್ವಯ ದಿನಾಂಕ:28–02–2026ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ 17ರ ಅನ್ವಯ ಕಾರ್ಯನಿರ್ವಹಣಾ ಸಮಿತಿ (BOM)ಯನ್ನು ರಚಿಸಿ ಕೊಂಡಿರುವುದನ್ನು ಒಪ್ಪಿ ಅನುಮೋದಿಸುವ ವಿಚಾರ.
15. ದಿನಾಂಕ: 24–04–2026 ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–14 ರನ್ವಯ ಸಿಬ್ಬಂದಿ ವೃಂದ ಬಲ ಮತ್ತು ವೇತನ ಶ್ರೇಣಿಯನ್ನು ಪರಿಶೀಲಿಸಿ ಓದಿ ಒಪ್ಪಿ ಅನುಮೋದಿಸುವುದು.
16. ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಸಿಬ್ಬಂದಿ ವರ್ಗದವರ ಸೇವೆಯನ್ನು ಪರಿಗಣಿಸಿ ದಿನಾಂಕ:24–04–2026ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–14ರ ಅನ್ವಯ ಪದೋನ್ನತಿ/ಬಡ್ತಿ ನೀಡಿರುವುದನ್ನು ಮತ್ತು ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಂಗಾಮಿ ನೌಕರರನ್ನು ದಿನಾಂಕ:25–11–2025ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–15(1)ರ ಅನ್ವಯ ಖಾಯಂ ಸಿಬ್ಬಂದಿಯಾಗಿ ನೇಮಕ ಮಾಡಿಕೊಂಡಿರುವುದನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.
17. ಬ್ಯಾಂಕಿನ ವತಿಯಿಂದ ಸಾಲ ಪಡೆದು ದೀರ್ಘಕಾಲದವರೆಗೂ ಸುಸ್ತಿಯಾಗಿರುವ ಸಾಲದ ಖಾತೆಗಳ ಬಗ್ಗೆ ಚರ್ಚಿಸಿ ಅನುಮೋದಿಸುವ ವಿಚಾರ.
18. ಬ್ಯಾಂಕಿನ ವತಿಯಿಂದ ಸಾಲ ಪಡೆದು ಸುಸ್ತಿದಾರರಾಗಿರುವ ಸಾಲಗಾರರಿಂದ ಸಾಲ ವಸೂಲಾತಿಗಾಗಿ ಸೆಕ್ಯುರಿಟೈಸೇಷನ್ ಕಾಯಿದೆ ಅನ್ವಯ ಕ್ರಮ ಜರುಗಿಸಿ ಹರಾಜು ಕ್ರಮ ಕೈಗೊಂಡಿರುವುದನ್ನು ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ದಾವಾ ಹೂಡಿ ಕ್ರಮ ಕೈಗೊಂಡಿರುವುದನ್ನು ಒಪ್ಪಿ ಅನುಮೋದಿಸುವ ವಿಚಾರ.
19. ಬ್ಯಾಂಕಿನ ಕಡೂರು ಶಾಖೆಯ ಕೌಂಟರ್‌ನ ಇಂಟೀರಿಯರ್ ಡೆಕೋರೇಷನ್ ಸಂಪೂರ್ಣವಾಗಿ ಹಾಳಾಗಿರುವುದನ್ನು ಮನಗಂಡು ದಿನಾಂಕ:26–05–2026ರಂದು ನಡೆದ ಕಾರ್ಯಕಾರಿ ಮಂಡಲಿಯ ಮಂಜೂರಾತಿ ನಿರೀಕ್ಷಣೆ ಮೇರೆಗೆ ಸರಿಪಡಿಸಿಕೊಂಡಿರುವುದನ್ನು ಮತ್ತು ಬೆಂಗಳೂರು ಶಾಖೆಯಲ್ಲಿ ಅಳವಡಿಸಿದ್ದ ಹಳೆಯ ಯುಪಿಎಸ್ ಬ್ಯಾಟರಿಗಳನ್ನು ತೆಗೆದು ಹೊಸದಾಗಿ ಅಳವಡಿಸಲು ಆಗಿರುವ ಖರ್ಚು ವೆಚ್ಚವನ್ನು ಮತ್ತು ಬ್ಯಾಂಕಿನ ಶಾಖೆಗಳ ಸ್ವಂತ ಕಟ್ಟಡಗಳನ್ನು ಪೈಂಟಿಂಗ್ ಮಾಡಿಸುವ ಬಗ್ಗೆ ಆಗಿರುವ ನಿರ್ಣಯವನ್ನು ಪರಿಶೀಲಿಸಿ ಒಪ್ಪಿ ಅನುಮೋದಿಸುವ ವಿಚಾರ.
20. ದಿನಾಂಕ: 31–07–2025ರಂದು ನಡೆದ ವಾರ್ಷಿಕ ಮಹಾ ಸಭಾ ತೀರ್ಮಾನ ಸಂಖ್ಯೆ–21 ಮತ್ತು 22ರ ಅನ್ವಯ ಬ್ಯಾಂಕಿನಲ್ಲಿ ಹೊಂದಿದ್ದ SIDD SOFT TECH PVT LTD ಸಾಫ್ಟ್‌ವೇರ್ ನಿಂದ IISPL (AVISHKAR CBSE) ಸಾಫ್ಟ್‌ವೇರ್‌ಗೆ ಬದಲಾಯಿಸಿದ್ದು ಈ ಬಗ್ಗೆ ಆಗಿರುವ ಖರ್ಚು ವೆಚ್ಚಗಳನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.
21. ಬ್ಯಾಂಕಿನಲ್ಲಿ ಹಾಲಿ ಹೊಂದಿದ್ದ SIDDSOFT TECH PVT LTD ಸಾಫ್ಟ್‌ವೇರ್ ನಿಂದ IISPL(AVISHKAR CBSE) ಸಾಫ್ಟ್‌ವೇರ್‌ಗೆ ಬದಲಾಯಿಸಿದ್ದು ಈ ಬಗ್ಗೆ KISSOM SOFTWARE SERVICES ಇವರಿಂದ ಪೋಸ್ಟ್ ಮೈಗ್ರೇಷನ್ ಆಡಿಟ್ ಮಾಡಿಸಿರುವ ವರದಿಯನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.
22. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

**ಕಾರ್ಯಕಾರಿ ಮಂಡಲಿ ಆದೇಶದ ಮೇರೆಗೆ**

**ದಿನಾಂಕ : 24.06.2026**

**(ಎನ್. ಮಂಜುನಾಥ)**
**ಪ್ರಧಾನ ವ್ಯವಸ್ಥಾಪಕರು,**
**ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ**

**ಸೂಚನೆ:** ಮಹಾಸಭೆಯಲ್ಲಿ ಸದಸ್ಯರು ಚರ್ಚಿಸಬೇಕಾದ ವಿಷಯಗಳ ಬಗ್ಗೆ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಲ್ಲಿ ಐದು(05) ದಿನಗಳ ಮುಂಚಿತವಾಗಿ ಲಿಖಿತವಾಗಿ ನೀಡಬಹುದು. ಅಂತಹ ವಿಷಯಗಳಿಗೆ ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಲು ಅವಕಾಶ ನೀಡಲಾಗುವುದು. ಸುಸ್ತಿದಾರರಲ್ಲದ ಸದಸ್ಯರುಗಳಿಗೆ ಮಾತ್ರ ಅವಕಾಶವಿರುತ್ತದೆ.

1. **ಪ್ರಾರ್ಥನೆ ಹಾಗೂ ಸ್ವಾಗತ**

ಟಿಪ್ಪಣಿ : ಬ್ಯಾಂಕಿನ ಸಿಬ್ಬಂದಿಯವರಿಂದ ಪ್ರಾರ್ಥನೆ ಹಾಗೂ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಡಿ.ಆದಿರಾಜಯ್ಯವರಿಂದ ಸ್ವಾಗತ

2. **28ನೇ ಸಾಮಾನ್ಯ ಸಭೆಯ ನೋಟೀಸ್‌ನ್ನು ಓದಿ ದಾಖಲು ಮಾಡುವುದು.**

ಟಿಪ್ಪಣಿ : 28ನೇ ಸಾಮಾನ್ಯ ಸಭೆಯ ನೋಟೀಸ್‌ನ್ನು ಓದಿದ ನಂತರ ದಾಖಲು ಮಾಡುವುದು.

3. **2025–26ನೇ ಸಾಲಿನಲ್ಲಿ ಮರಣ ಹೊಂದಿರುವ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚನೆ.**

ಟಿಪ್ಪಣಿ : 2025–26ನೇ ಸಾಲಿನಲ್ಲಿ ಮರಣ ಹೊಂದಿರುವ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚಿಸುವುದು.

4. **ಹಿಂದಿನ ಮಹಾಸಭೆಯ ನಡವಳಿಕೆಗಳನ್ನು ಓದಿ ಒಪ್ಪಿ ದೃಢೀಕರಿಸುವುದು.**

ಟಿಪ್ಪಣಿ : 31–07–2025 ರಂದು ನಡೆದ ಮಹಾಸಭೆಯ ನಡವಳಿಕೆಗಳನ್ನು ಓದಿ ಒಪ್ಪಿ ದೃಢೀಕರಿಸುವುದು.

5. **ಕಳೆದ ಸಾಲಿನಲ್ಲಿ ಸೇರ್ಪಡೆಗೊಂಡ ಸದಸ್ಯರು ಹಾಗೂ ಸದಸ್ಯತ್ವದಿಂದ ವಿಮುಕ್ತಿ ಗೊಳಿಸಿದ ಸದಸ್ಯರ ವರದಿಯನ್ನು ಓದಿ ಒಪ್ಪಿ ಅಂಗೀಕರಿಸುವುದು.**

ಟಿಪ್ಪಣಿ : ವರ್ಷದ ಆರಂಭದಲ್ಲಿ ಬ್ಯಾಂಕಿನ ಸದಸ್ಯರ ಸಂಖ್ಯೆ 2397 ಈ ವರ್ಷ ತಮ್ಮ ಸದಸ್ಯತ್ವವನ್ನು ಹಿಂಪಡೆದವರ ಸಂಖ್ಯೆ 108 ಮತ್ತು ಈ ವರ್ಷದಲ್ಲಿ ಹೊಸದಾಗಿ 54 ಜನ ಸದಸ್ಯತ್ವ ಪಡೆದಿದ್ದು ವರ್ಷದ ಕೊನೆಯಲ್ಲಿ ಇದ್ದ ಬ್ಯಾಂಕಿನ ಒಟ್ಟು ಸದಸ್ಯರ ಸಂಖ್ಯೆ 2343 ಅನ್ನು ಒಪ್ಪಿ ಅಂಗೀಕರಿಸಬಹುದು.

6. **2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಪಾಲನಾ ವರದಿಯ ನಡವಳಿಕೆಗಳನ್ನು ಓದಿ ಒಪ್ಪಿ ಅಂಗೀಕರಿಸುವುದು.**

ಟಿಪ್ಪಣಿ : 28ನೇ ಸರ್ವಸದಸ್ಯರ ಮಹಾಸಭೆಯ ನೋಟಿಸ್‌ನಲ್ಲಿ ನೀಡಲಾದ ಲೆಕ್ಕಪರಿಶೋಧನಾ ವರದಿಗೆ, ಆಡಳಿತ ಮಂಡಲಿ ಸಲ್ಲಿಸಿದ ಪಾಲನಾ ವರದಿಯನ್ನು ಪರಿಶೀಲಿಸಿ ಒಪ್ಪಿ ಅಂಗೀಕರಿಸುವುದು

7. **2025–26ನೇ ಸಾಲಿನ ಲಾಭ ಹಂಚಿಕೆ ಅನುಮೋದಿಸುವುದು.**

ಟಿಪ್ಪಣಿ : 2025–26ನೇ ಸಾಲಿನಲ್ಲಿ ಬ್ಯಾಂಕು ರೂ. 1,48,89,879.38 ಗಳು ಲಾಭಗಳಿಸಿದ್ದು ನೋಟಿಸಿನಲ್ಲಿ ತಿಳಿಸಿದಂತೆ ಲಾಭವನ್ನು ವಿಲೇವಾರಿ ಮಾಡಲಾಗುವುದು.

8. **ಕಳೆದ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್) ಗಿಂತಲು ಹೆಚ್ಚುವರಿ ಆಗಿರುವ ವೆಚ್ಚಕ್ಕೆ ಅನುಮೋದಿಸುವುದು.**

ಟಿಪ್ಪಣಿ : ಕಳೆದ ಸಾಲಿನ ಅಂದಾಜು ಆಯ–ವ್ಯಯ(ಬಡ್ಜೆಟ್) ಗಿಂತಲು ಕೆಲವು ಶೀರ್ಷಿಕೆಗಳಡಿ ಹೆಚ್ಚಿನ ವೆಚ್ಚವಾಗಿರುತ್ತದೆ ಅದನ್ನು ಪರಿಶೀಲಿಸಿ ಅನುಮೋದಿಸಬಹುದು

9. **2026–27ನೇ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್)ವನ್ನು ಮಂಜೂರು ಮಾಡುವುದು.**

ಟಿಪ್ಪಣಿ : 2026–27ನೇ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್)ವನ್ನು ಮಂಜೂರು ಮಾಡಬಹುದಾಗಿದೆ.

10. **2026–27ನೇ ಸಾಲಿಗೆ ನಿರ್ದೇಶಕ ಮಂಡಲಿಯು ರೂಪಿಸಿದ ಯೋಜನೆ ಹಾಗೂ ವಾರ್ಷಿಕ ಕಾರ್ಯಕ್ರಮಗಳನ್ನು ಓದಿ ಒಪ್ಪಿ ಅನುಮೋದಿಸುವುದು.**

ಟಿಪ್ಪಣಿ : 2026–27ನೇ ಸಾಲಿಗೆ ನಿರ್ದೇಶಕ ಮಂಡಲಿಯು ರೂಪಿಸಿದ ಯೋಜನೆ ಹಾಗೂ ವಾರ್ಷಿಕ ಕಾರ್ಯಕ್ರಮಗಳನ್ನು ಓದಿ ಒಪ್ಪಿ ಅನುಮೋದಿಸಬಹುದು.

11. **2026–27ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ದಿನಾಂಕ:24–04 2026ರಂದು ನಿರ್ದೇಶಕ ಮಂಡಲಿ ಸಭಾ ತೀರ್ಮಾನ ಸಂಖ್ಯೆ: 06 ರ ಅನ್ವಯ ನಿರ್ಣಯಿಸಿರುವುದನ್ನು ಅನುಮೋದಿಸುವ ವಿಚಾರ.**

ಟಿಪ್ಪಣಿ : 2026–27ನೇ ಸಾಲಿಗೆ ಶಾಸನಬದ್ದ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕಿಗೆ ಶಿಫಾರಸ್ಸು ಕಳುಹಿಸಿರುವುದನ್ನು ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ದಿನಾಂಕ: 24–04–2026ರಂದು ನಿರ್ದೇಶಕ ಮಂಡಲಿ ಸಭಾ ತೀರ್ಮಾನ ಸಂಖ್ಯೆ: 06 ರ ಅನ್ವಯ ನಿರ್ಣಯಿಸಿರುವುದನ್ನು ಅನುಮೋದಿಸಬಹುದು.

12. **ದಿನಾಂಕ:14–02–2026ರಂದು ನಡೆದ ಚುನಾವಣೆಯಲ್ಲಿ ನೂತನ ಆಡಳಿತ ಮಂಡಲಿಯ ಸದಸ್ಯರು ಆಯ್ಕೆಯಾಗಿರುವುದನ್ನು ಅನುಮೋದಿಸುವ ವಿಚಾರ.**

ಟಿಪ್ಪಣಿ : ದಿನಾಂಕ: 14–02–2026ರಂದು ನಡೆದ ಚುನಾವಣೆಯಲ್ಲಿ ಅವಿರೋದವಾಗಿ 13 ಜನ ಸದಸ್ಯರು, ನೂತನ ಆಡಳಿತ ಮಂಡಲಿಯ ಸದಸ್ಯರಾಗಿ ಆಯ್ಕೆಯಾಗಿರುವುದನ್ನು ಅನುಮೋದಿಸಬಹುದು.

13. **ಸೌಹಾರ್ದ ಸಹಕಾರಿ ಕಾಯ್ದೆ–24ರ ಅನ್ವಯ ಮತ್ತು ಬ್ಯಾಂಕಿನ ಉಪವಿಧಿ ಸಂಖ್ಯೆ–43(2)ರ ಅನ್ವಯ ಬ್ಯಾಂಕಿನ ನಿರ್ದೇಶಕ ಮಂಡಲಿಯಲ್ಲಿ ಖಾಲಿ ಇದ್ದ ವೃತ್ತಿಪರ ನಿರ್ದೇಶಕರನ್ನು ದಿನಾಂಕ:28–02–2026ರಂದು ನಡೆದ ನಿರ್ದೇಶಕ ಮಂಡಲಿ ಸಭಾ ತೀರ್ಮಾನ ಸಂಖ್ಯೆ 16ರ ಅನ್ವಯ ಆಯ್ಕೆ ಮಾಡಿಕೊಂಡಿರುವುದನ್ನು ಓದಿ ಒಪ್ಪಿ ಅನುಮೋದಿಸುವ ವಿಚಾರ.**

ಟಿಪ್ಪಣಿ : ಸೌಹಾರ್ದ ಸಹಕಾರಿ ಕಾಯ್ದೆ–24ರ ಅನ್ವಯ ಮತ್ತು ಬ್ಯಾಂಕಿನ ಉಪವಿಧಿ ಸಂಖ್ಯೆ–43(2)ರ ಅನ್ವಯ ಬ್ಯಾಂಕಿನ ನಿರ್ದೇಶಕ ಮಂಡಲಿಯಲ್ಲಿ ಖಾಲಿ ಇದ್ದ ವೃತ್ತಿಪರ ನಿರ್ದೇಶಕರನ್ನು ದಿನಾಂಕ:28–02–2026ರಂದು ನಡೆದ ನಿರ್ದೇಶಕ ಮಂಡಲಿ ಸಭಾ ತೀರ್ಮಾನ ಸಂಖ್ಯೆ 16ರ ಅನ್ವಯ ಚಾರ್ಟರ್ಡ್ ಅಕೌಂಟೆಂಟ್ ಒಬ್ಬರು ಹಾಗೂ ನಿವೃತ್ತ ಹಿರಿಯ ವ್ಯವಸ್ಥಾಪಕರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಇಲ್ಲಿ ಸೇವೆ ಸಲ್ಲಿಸಿರುವವರನ್ನು ವೃತ್ತಿಪರ ನಿರ್ದೇಶಕರಾಗಿ ಆಯ್ಕೆಮಾಡಿಕೊಂಡಿರುವುದನ್ನು ಓದಿ ಒಪ್ಪಿ ಅನುಮೋದಿಸಬಹುದು.

14. **ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದ ಅನ್ವಯ ಹಾಗೂ ಬ್ಯಾಂಕಿನ ಬೈಲಾ(ಉಪವಿಧಿ) ಅನ್ವಯ ದಿನಾಂಕ:28–02–2026ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ 17ರ ಅನ್ವಯ ಕಾರ್ಯನಿರ್ವಹಣಾ ಸಮಿತಿ(BOM) ಯನ್ನು ರಚಿಸಿ ಕೊಂಡಿರುವುದನ್ನು ಓದಿ ಒಪ್ಪಿ ಅನುಮೋದಿಸುವ ವಿಚಾರ.**

ಟಿಪ್ಪಣಿ : ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದ ಅನ್ವಯ ಹಾಗೂ ಬ್ಯಾಂಕಿನ ಬೈಲಾ(ಉಪವಿಧಿ) ಅನ್ವಯ ದಿನಾಂಕ:28–02–2026ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ 17ರ ಅನ್ವಯ ಕಾರ್ಯನಿರ್ವಹಣಾ ಸಮಿತಿ (BOM)ಯನ್ನು ರಚಿಸಿ ಕೊಂಡಿರುವುದನ್ನು ಓದಿ ಒಪ್ಪಿ ಅನುಮೋದಿಸಬಹುದು.

**15. ದಿನಾಂಕ: 24–04–2026 ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–14 ರನ್ವಯ ಸಿಬ್ಬಂದಿ ವೃಂದ ಬಲ ಮತ್ತು ವೇತನ ಶ್ರೇಣಿಯನ್ನು ಪರಿಶೀಲಿಸಿ ಓದಿ ಒಪ್ಪಿ ಅನುಮೋದಿಸುವುದು.**

ಟಿಪ್ಪಣಿ : ದಿನಾಂಕ: 24–04–2026 ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–14 ರನ್ವಯ ಸಿಬ್ಬಂದಿ ವೃಂದ ಬಲ ಮತ್ತು ವೇತನ ಶ್ರೇಣಿಯನ್ನು ಪರಿಶೀಲಿಸಿ ಓದಿ ಒಪ್ಪಿ ಅನುಮೋದಿಸಬಹುದು.

**16. ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಸಿಬ್ಬಂದಿ ವರ್ಗದವರ ಸೇವೆಯನ್ನು ಪರಿಗಣಿಸಿ ದಿನಾಂಕ:24–04–2026ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–14ರ ಅನ್ವಯ ಪದೋನ್ನತಿ/ಬಡ್ತಿ ನೀಡಿರುವುದನ್ನು ಮತ್ತು ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಂಗಾಮಿ ನೌಕರನನ್ನು ದಿನಾಂಕ: 25–11–2025ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–15(1)ರ ಅನ್ವಯ ಖಾಯಂ ಸಿಬ್ಬಂದಿಯಾಗಿ ನೇಮಕ ಮಾಡಿಕೊಂಡಿರುವುದನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.**

ಟಿಪ್ಪಣಿ : ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಸಿಬ್ಬಂದಿ ವರ್ಗದವರ ಸೇವೆಯನ್ನು ಪರಿಗಣಿಸಿ ದಿನಾಂಕ:24–04–2026ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–14ರ ಅನ್ವಯ ಪದೋನ್ನತಿ/ಬಡ್ತಿ ನೀಡಿರುವುದನ್ನು ಮತ್ತು ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಂಗಾಮಿ ನೌಕರನನ್ನು ದಿನಾಂಕ:25–11–2025ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ 15(1)ರ ಅನ್ವಯ ಖಾಯಂ ಸಿಬ್ಬಂದಿಯಾಗಿ ನೇಮಕ ಮಾಡಿಕೊಂಡಿರುವುದನ್ನು ಪರಿಶೀಲಿಸಿ ಅನುಮೋದಿಸಬಹುದು.

**17. ಬ್ಯಾಂಕಿನ ವತಿಯಿಂದ ಸಾಲ ಪಡೆದು ದೀರ್ಘಕಾಲದವರೆಗೂ ಸುಸ್ತಿಯಾಗಿರುವ ಸಾಲದ ಖಾತೆಗಳ ಬಗ್ಗೆ ಚರ್ಚಿಸಿ ಅನುಮೋದಿಸುವ ವಿಚಾರ.**

ಟಿಪ್ಪಣಿ : ಬ್ಯಾಂಕಿನ ವತಿಯಿಂದ ಸಾಲ ಪಡೆದು ದೀರ್ಘಕಾಲದವರೆಗೂ ಸುಸ್ತಿಯಾಗಿರುವ ಸಾಲದ ಖಾತೆಗಳ ಬಗ್ಗೆ ಚರ್ಚಿಸಿ ಅನುಮೋದಿಸಬಹುದು.

**18. ಬ್ಯಾಂಕಿನ ವತಿಯಿಂದ ಸಾಲ ಪಡೆದು ಸುಸ್ತಿದಾರರಾಗಿರುವ ಸಾಲಗಾರರಿಂದ ಸಾಲ ವಸೂಲಾತಿಗಾಗಿ ಸೆಕ್ಯುರಿಟೈಸೇಷನ್ ಕಾಯಿದೆ ಅನ್ವಯ ಕ್ರಮ ಜರುಗಿಸಿ ಹರಾಜು ಕ್ರಮ ಕೈಗೊಂಡಿರುವುದನ್ನು ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ದಾವಾ ಹೂಡಿ ಕ್ರಮ ಕೈಗೊಂಡಿರುವುದನ್ನು ಒಪ್ಪಿ ಅನುಮೋದಿಸುವ ವಿಚಾರ.**

ಟಿಪ್ಪಣಿ : ಬ್ಯಾಂಕಿನ ವತಿಯಿಂದ ಸಾಲ ಪಡೆದು ಸುಸ್ತಿದಾರರಾಗಿರುವ ಸಾಲಗಾರರಿಂದ ಸಾಲ ವಸೂಲಾತಿಗಾಗಿ ಸೆಕ್ಯುರಿಟೈಸೇಷನ್ ಕಾಯಿದೆ ಅನ್ವಯ ಕ್ರಮ ಜರುಗಿಸಿ ಹರಾಜು ಕ್ರಮ ಕೈಗೊಂಡಿರುವುದನ್ನು ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ದಾವಾ ಹೂಡಿ ಕ್ರಮ ಕೈಗೊಂಡಿರುವುದನ್ನು ಒಪ್ಪಿ ಅನುಮೋದಿಸಬಹುದು.

**19. ಬ್ಯಾಂಕಿನ ಕಡೂರು ಶಾಖೆಯ ಕೌಂಟರ್‌ನ ಇಂಟೀರಿಯರ್ ಡೆಕೋರೇಷನ್ ಸಂಪೂರ್ಣವಾಗಿ ಹಾಳಾಗಿರುವುದನ್ನು ಮನಗಂಡು ದಿನಾಂಕ: 26–05–2026ರಂದು ನಡೆದ ಕಾರ್ಯಕಾರಿ ಮಂಡಲಿಯ ಮಂಜೂರಾತಿ ನಿರೀಕ್ಷಣೆ ಮೇರೆಗೆ ಸರಿಪಡಿಸಿಕೊಂಡಿರುವುದನ್ನು ಮತ್ತು ಬೆಂಗಳೂರು ಶಾಖೆಯಲ್ಲಿ ಅಳವಡಿಸಿದ್ದ ಹಳೆಯ ಯುಪಿಎಸ್ ಬ್ಯಾಟರಿಗಳನ್ನು ತೆಗೆದು ಹೊಸದಾಗಿ ಅಳವಡಿಸಲು ಆಗಿರುವ ಖರ್ಚು ವೆಚ್ಚವನ್ನು ಮತ್ತು ಬ್ಯಾಂಕಿನ ಶಾಖೆಗಳ ಸ್ವಂತ ಕಟ್ಟಡಗಳನ್ನು ಪೈಂಟಿಂಗ್ ಮಾಡಿಸುವ ಬಗ್ಗೆ ಆಗಿರುವ ನಿರ್ಣಯವನ್ನು ಪರಿಶೀಲಿಸಿ ಒಪ್ಪಿ ಅನುಮೋದಿಸುವ ವಿಚಾರ.**

ಟಿಪ್ಪಣಿ : ಬ್ಯಾಂಕಿನ ಕಡೂರು ಶಾಖೆಯ ಕೌಂಟರ್‌ನ ಇಂಟೀರಿಯರ್ ಡೆಕೋರೇಷನ್ ಸಂಪೂರ್ಣವಾಗಿ ಹಾಳಾಗಿರುವುದನ್ನು ಮನಗಂಡು ದಿನಾಂಕ: 26–05–2026ರಂದು ನಡೆದ ಕಾರ್ಯಕಾರಿ ಮಂಡಲಿಯ ಮಂಜೂರಾತಿ ನಿರೀಕ್ಷಣೆ ಮೇರೆಗೆ ಸರಿಪಡಿಸಿಕೊಂಡಿರುವುದನ್ನು ಮತ್ತು ಬೆಂಗಳೂರು ಶಾಖೆಯಲ್ಲಿ ಅಳವಡಿಸಿದ್ದ ಹಳೆಯ ಯುಪಿಎಸ್ ಬ್ಯಾಟರಿಗಳನ್ನು ತೆಗೆದು ಹೊಸದಾಗಿ ಅಳವಡಿಸಲು ಆಗಿರುವ ಖರ್ಚು ವೆಚ್ಚವನ್ನು ಮತ್ತು ಬ್ಯಾಂಕಿನ ಶಾಖೆಗಳ ಸ್ವಂತ ಕಟ್ಟಡಗಳನ್ನು ಪೈಂಟಿಂಗ್ ಮಾಡಿಸುವ ಬಗ್ಗೆ ಆಗಿರುವ ನಿರ್ಣಯವನ್ನು ಪರಿಶೀಲಿಸಿ ಒಪ್ಪಿ ಅನುಮೋದಿಸಬಹುದು.

**20. ದಿನಾಂಕ: 31–07–2025ರಂದು ನಡೆದ ವಾರ್ಷಿಕ ಮಹಾ ಸಭಾ ತೀರ್ಮಾನ ಸಂಖ್ಯೆ–21 ಮತ್ತು 22ರ ಅನ್ವಯ ಬ್ಯಾಂಕಿನಲ್ಲಿ ಹೊಂದಿದ್ದ SIDDSOFT TECH PVT LTD ಸಾಫ್ಟ್‌ವೇರ್ ನಿಂದ IISPL(AVISHKAR CBSE) ಸಾಫ್ಟ್‌ವೇರ್‌ಗೆ ಬದಲಾಯಿಸಿದ್ದು ಈ ಬಗ್ಗೆ ಆಗಿರುವ ಖರ್ಚು ವೆಚ್ಚಗಳನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.**

ಟಿಪ್ಪಣಿ : ದಿನಾಂಕ: 31–07–2025ರಂದು ನಡೆದ ವಾರ್ಷಿಕ ಮಹಾ ಸಭಾ ತೀರ್ಮಾನ ಸಂಖ್ಯೆ–21 ಮತ್ತು 22ರ ಅನ್ವಯ ಬ್ಯಾಂಕಿನಲ್ಲಿ ಹೊಂದಿದ್ದ SIDDSOFT TECH PVT LTD ಸಾಫ್ಟ್‌ವೇರ್ ನಿಂದ IISPL(AVISHKAR CBSE) ಸಾಫ್ಟ್‌ವೇರ್‌ಗೆ ಬದಲಾಯಿಸಿದ್ದು ಈ ಬಗ್ಗೆ ಆಗಿರುವ ಖರ್ಚು ವೆಚ್ಚಗಳನ್ನು ಪರಿಶೀಲಿಸಿ ಅನುಮೋದಿಸಬಹುದು.

**21. ಬ್ಯಾಂಕಿನಲ್ಲಿ ಹಾಲಿ ಹೊಂದಿದ್ದ SIDDSOFT TECH PVT LTD ಸಾಫ್ಟ್‌ವೇರ್ ನಿಂದ IISPL(AVISHKAR CBSE) ಸಾಫ್ಟ್‌ವೇರ್‌ಗೆ ಬದಲಾಯಿಸಿದ್ದು ಈ ಬಗ್ಗೆ KISSOM SOFTWARE SERVICES ಇವರಿಂದ "ಪೋಸ್ಟ್ ಮೈಗ್ರೇಷನ್ ಆಡಿಟ್" ಮಾಡಿಸಿರುವ ವರದಿಯನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.**

ಟಿಪ್ಪಣಿ : ಬ್ಯಾಂಕಿನಲ್ಲಿ ಹಾಲಿ ಹೊಂದಿದ್ದ SIDDSOFT TECH PVT LTD ಸಾಫ್ಟ್‌ವೇರ್ ನಿಂದ IISPL(AVISHKAR CBSE) ಸಾಫ್ಟ್‌ವೇರ್‌ಗೆ ಬದಲಾಯಿಸಿದ್ದು ಈ ಬಗ್ಗೆ KISSOM SOFTWARE SERVICES ಇವರಿಂದ **"ಪೋಸ್ಟ್ ಮೈಗ್ರೇಷನ್ ಆಡಿಟ್"** ಮಾಡಿಸಿರುವ ವರದಿಯನ್ನು ಪರಿಶೀಲಿಸಿ ಅನುಮೋದಿಸಬಹುದು.

**22. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.**

ಟಿಪ್ಪಣಿ : ಸದಸ್ಯರಿಂದ ಬರಬಹುದಾದ ಲಿಖಿತ ಪ್ರಶ್ನೆಗಳಿಗೆ ಉತ್ತರಿಸುವುದು.



# ಶ್ರೀ ಡಿ. ಆದಿರಾಜಯ್ಯ
## ಉಪಾಧ್ಯಕ್ಷರು

| | | |
|---|---|---|
| ಉಪಾಧ್ಯಕ್ಷರು | : | ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ |
| ಉಪಾಧ್ಯಕ್ಷರು | : | ಶ್ರೀ ಗಣೇಶ ಸದನ ಟ್ರಸ್ಟ್ (ರಿ.), ಹೊಸದುರ್ಗ |
| ಉಪಾಧ್ಯಕ್ಷರು | : | ವರ್ತಕರ ಸಂಘ (ರಿ.), ಹೊಸದುರ್ಗ |
| ಉಪಾಧ್ಯಕ್ಷರು | : | ಮಹಾತ್ಮ ಗಾಂಧಿ ವಿದ್ಯಾ ಸಂಸ್ಥೆ (ರಿ.), ಹೊಸದುರ್ಗ |
| ಉಪಾಧ್ಯಕ್ಷರು | : | ಶ್ರೀ ಶಿರಡಿ ಸಾಯಿಬಾಬಾ ಟ್ರಸ್ಟ್ (ರಿ.), ಹೊಸದುರ್ಗ |

# ಆಡಳಿತ ಮಂಡಲಿ ಸದಸ್ಯರು



**ಶ್ರೀ ಹೆಚ್.ಎಸ್.ಶಿವಸ್ವಾಮಿ**
ಅಧ್ಯಕ್ಷರು
(ವರ್ತಕರು)



**ಶ್ರೀ. ಡಿ. ಆದಿರಾಜಯ್ಯ**
ಉಪಾಧ್ಯಕ್ಷರು
(ವರ್ತಕರು)



**ಶ್ರೀಮತಿ ನಾಗಲಾಂಬಿಕಾ ಕಲ್ಮಠ್**
ನಿರ್ದೇಶಕರು
(ನಿವೃತ್ತ ಹಿರಿಯ ವ್ಯವಸ್ಥಾಪಕರು, ಕೆನರಾ ಬ್ಯಾಂಕ್)



**ಶ್ರೀಮತಿ ಪಾರ್ವತಮ್ಮ ಟಿ.ಸಿ**
ನಿರ್ದೇಶಕರು
(ವರ್ತಕರು)



**ಶ್ರೀ ಶ್ರೀನಾಥ್ ಟಿ.ಎಸ್.**
ನಿರ್ದೇಶಕರು
(ವರ್ತಕರು)



**ಶ್ರೀ ಪ್ರತಾಪ್ ಎನ್.**
ನಿರ್ದೇಶಕರು
(ವಕೀಲರು)

# ಆಡಳಿತ ಮಂಡಲಿ ಸದಸ್ಯರು



**ಶ್ರೀ ಜಿ.ಪಾಪಯ್ಯ**
ನಿರ್ದೇಶಕರು, (ನಿವೃತ್ತ ನೌಕರರು, ರೇಷ್ಮೆ ಇಲಾಖೆ)



**ಶ್ರೀ ತಿಪ್ಪೇಸ್ವಾಮಿ ಜಿ.ಎನ್.**
ನಿರ್ದೇಶಕರು (ವರ್ತಕರು)



**ಶ್ರೀ ಡಿ.ಎನ್.ಕೃಷ್ಣಮೂರ್ತಿ**
ನಿರ್ದೇಶಕರು (ವರ್ತಕರು)



**ಶ್ರೀ ಲಕ್ಷ್ಮೀರಂಗನಾಥ ಆರ್.**
ನಿರ್ದೇಶಕರು (ನಿವೃತ್ತ ಅರ್ಥಶಾಸ್ತ್ರ ಉಪನ್ಯಾಸಕರು)



**ಶ್ರೀಮತಿ ಡಾ|| ವೀಣಾ ಉಮೇಶ್**
ನಿರ್ದೇಶಕರು (ವೈದ್ಯರು)



**ಶ್ರೀ ಕಲ್ಲೇಶ್. ಎನ್**
ನಿರ್ದೇಶಕರು (ನಿವೃತ್ತ ಇಂಜಿನಿಯರ್)



**ಶ್ರೀ ಎ.ಜಿ.ಗಿರೀಶ**
ನಿರ್ದೇಶಕರು (ಕೃಷಿಕರು/ಪ್ರಗತಿಪರ ರೈತರು)



**ಶ್ರೀ ಎಸ್.ಮೋಹನ್**
ವೃತ್ತಿಪರ ನಿರ್ದೇಶಕರು
(ಚಾರ್ಟರ್ಡ್ ಅಕೌಂಟೆಂಟ್)



**ಶ್ರೀ ನಾಗರಾಜಶಾಸ್ತ್ರಿ ಕುರ್ತಕೋಟಿ**
ವೃತ್ತಿಪರ ನಿರ್ದೇಶಕರು
(ನಿವೃತ್ತ ಹಿರಿಯ ವ್ಯವಸ್ಥಾಪಕರು, ಎಸ್.ಬಿ.ಎಂ.)

# ಕಾರ್ಯನಿರ್ವಹಣಾ ಸಮಿತಿ ಸದಸ್ಯರು (BOM)



**ಶ್ರೀ ಡಿ.ಆದಿರಾಜಯ್ಯ**
ಅಧ್ಯಕ್ಷರು



**ಶ್ರೀ ಎಸ್.ಮೋಹನ್**
ಚಾರ್ಟರ್ಡ್ ಅಕೌಂಟೆಂಟ್



**ಶ್ರೀ ನಾಗರಾಜ ಶಾಸ್ತ್ರಿ ಕುರ್ತಕೋಟಿ**
ನಿವೃತ್ತ ಹಿರಿಯ ವ್ಯವಸ್ಥಾಪಕರು, ಎಸ್.ಬಿ.ಎಂ.



**ಶ್ರೀ ರಮೇಶ್ ಪಿ.ವಿ**
ನಿವೃತ್ತ ಹಿರಿಯ ವ್ಯವಸ್ಥಾಪಕರು
ಐ.ಎನ್.ಜಿ. ವೈಶ್ಯ ಬ್ಯಾಂಕ್



**ಶ್ರೀ ಪ್ರತಾಪ್ ಎನ್**
ವಕೀಲರು,
ಕಾನೂನು ಸಲಹೆಗಾರರು



# 28ನೇ ಸರ್ವಸದಸ್ಯರ ಮಹಾಸಭೆಯ ವಾರ್ಷಿಕ ವರದಿ

ಸನ್ಮಾನ್ಯ ಸಹಕಾರಿ ಬಂಧುಗಳೇ, ಸಸ್ನೇಹ ನಮಸ್ಕಾರಗಳು,

ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಆಡಳಿತ ಮಂಡಲಿ ಪರವಾಗಿ ತಮ್ಮೆಲ್ಲರನ್ನೂ **"ಸರ್ವಸದಸ್ಯರ ವಾರ್ಷಿಕ ಮಹಾಸಭೆ"** ಗೆ ಹಾರ್ದಿಕವಾಗಿ ಸ್ವಾಗತಿಸುತ್ತೇನೆ.

2025–26ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ವರದಿಯನ್ನು ತಮ್ಮಗಳ ಮುಂದೆ ಸಾದರ ಪಡಿಸುವ ದೆಸೆಯಲ್ಲಿ ಬ್ಯಾಂಕಿನ ಒಂದು ವರ್ಷದ ಆಡಳಿತ ವ್ಯವಸ್ಥೆಗೆ ಪೂರಕವಾಗಿ ಸಂಬಂಧಿಸಿದಂತೆ ಕೆಲವು ವಿಷಯಗಳನ್ನು ತಮ್ಮಗಳ ಮುಂದೆ ವ್ಯಕ್ತಪಡಿಸಲು ಇಚ್ಛೈಸುತ್ತೇನೆ.

2025–26ನೇ ಸಾಲಿನಲ್ಲಿ ಬ್ಯಾಂಕಿನ ಚುನಾಯಿತ ಪ್ರತಿನಿಧಿಗಳ ಅವಧಿಯು 5 ವರ್ಷಗಳು ಪೂರ್ಣಗೊಂಡಿದ್ದು, ಈ ವರ್ಷದಲ್ಲಿಯೇ ಬ್ಯಾಂಕಿನ ಚುನಾವಣೆಯನ್ನು ಎದುರಿಸುವ ಪರಿಸ್ಥಿತಿಯು ಒದಗಿ ಬಂತು. ಅಲ್ಲದೆ ಆಡಳಿತದ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಮಾಣಿಕವಾಗಿ ನಿರ್ದೇಶಕರುಗಳ ಪ್ರೋತ್ಸಾಹ, ಸಮನ್ವಯದಿಂದ ಧೈರ್ಯವಾಗಿ ಚುನಾವಣೆಯನ್ನು ಎದುರಿಸಿ ಪ್ರಸಕ್ತ ಸಾಲಿನಿಂದ ಮುಂದಿನ 5 ವರ್ಷಗಳ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದೇವೆ ಎಂಬ ಅಂಶವನ್ನು ತಮ್ಮಗಳ ಮುಂದೆ ವ್ಯಕ್ತಪಡಿಸಲು ಸಂತೋಷವೆನಿಸಿದೆ.

ಬ್ಯಾಂಕಿನ ಆಡಳಿತದ ವಿಷಯಕ್ಕೆ ಸಂಬಂಧಿಸಿದಂತೆ, ಬ್ಯಾಂಕು ಕಳೆದ ಸಾಲಿನಲ್ಲಿ ಕ್ಲಿಷ್ಟಕರ ಪರಿಸ್ಥಿತಿಯನ್ನು ಎದುರಿಸಿದರೂ ಸಹ ಬ್ಯಾಂಕಿಗೆ ವಿಶ್ವಾಸಪೂರ್ವಕವಾಗಿ ಹಣ ತೊಡಗಿಸಲು ಬ್ಯಾಂಕಿನ ಮಾನ್ಯ ಸದಸ್ಯರು ಮತ್ತು ಗ್ರಾಹಕ ಬಂಧುಗಳು ಈ ಸಾಲಿನಲ್ಲಿ ಗಣನೀಯ ಪ್ರಮಾಣದಲ್ಲಿ ಠೇವಣಿ ತೊಡಗಿಸಿರುವ ವಿಷಯವನ್ನು ತಮ್ಮಗಳ ಮುಂದೆ ಹಂಚಿಕೊಳ್ಳಲು ನನಗೆ ತುಂಬಾ ಸಂತೋಷವೆನಿಸುತ್ತಿದೆ. ಇದರ ಮಧ್ಯೆಯೂ ಸಹ ಬ್ಯಾಂಕಿನ ಠೇವಣಿಗೆ ಪೂರಕವಾಗಿ ಬ್ಯಾಂಕಿನ ಅಭಿವೃದ್ಧಿಗಾಗಿ ಸಾಲ ನೀಡುವ ದೆಸೆಯಲ್ಲಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು, ವ್ಯವಸ್ಥಾಪಕರುಗಳು ಹಾಗೂ ಸಿಬ್ಬಂದಿ ವರ್ಗದವರ ಪರಿಶ್ರಮವನ್ನು ಶ್ಲಾಘಿಸಲೇಬೇಕು. ಈ ಸಾಲಿನಲ್ಲಿ ಬ್ಯಾಂಕು ಸದಸ್ಯರುಗಳಿಗೆ ವಿವಿಧ ಯೋಜನೆಗಳ ಅಡಿಯಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ಸಾಲ ನೀಡುವ ಗುರಿಯನ್ನು ಸಾಧಿಸಲು ವಿಫಲವಾಗಿದ್ದಾಗ್ಯೂ ಸಹ ಬ್ಯಾಂಕ್‌ನ್ನು ಲಾಭದತ್ತ ಕೊಂಡೊಯ್ಯುವ ದೆಸೆಯಲ್ಲಿ ಬ್ಯಾಂಕಿನ ಸಿಬ್ಬಂದಿವರ್ಗದವರ ಪಾತ್ರ ಅಭಿನಂದನಾರ್ಹ ಎಂದು ತಮ್ಮಗಳ ಮುಂದೆ ಆತ್ಮ ಸಂತೋಷದಿಂದ ವ್ಯಕ್ತಪಡಿಸಲು ಹೆಮ್ಮೆಯೆನಿಸುತ್ತಿದೆ.

ಈ ಪ್ರಸಕ್ತ ಸಾಲಿನಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಹಲವಾರು ಸಂಘರ್ಷಗಳ ನಡುವೆ ಬ್ಯಾಂಕಿನ ಆರ್ಥಿಕ ವ್ಯವಸ್ಥೆಯನ್ನು ಸರಿಯಾದ ಹಾದಿಯಲ್ಲಿ ಕೊಂಡೊಯ್ಯಲು ಹರಸಾಹಸ ಪಡುವಂತಾಯಿತು. ಕೊನೆಯ ನಾಲ್ಕು ತಿಂಗಳುಗಳ ಕಾಲ ಸಾಲ ವಸೂಲಾತಿಯಲ್ಲಿ ನಾವುಗಳು ಕೈಗೊಂಡ ಕಠಿಣ ಕ್ರಮಗಳಿಂದ ಬ್ಯಾಂಕಿನ ಆಡಳಿತವನ್ನು, ಆರ್ಥಿಕ ಪರಿಸ್ಥಿತಿಯನ್ನು ಸರಿಹಾದಿಗೆ ತರುವ ದೆಸೆಯಲ್ಲಿ ನಾವುಗಳು ಯಶಸ್ಸನ್ನು ಕಂಡಿದ್ದೇವೆ ಎಂಬ ವಿಷಯವನ್ನು ನಿಮ್ಮ ಮುಂದೆ ವ್ಯಕ್ತಪಡಿಸಲು ಸಂತೋಷವೆನಿಸುತ್ತಿದೆ.

ಇತ್ತೀಚಿನ ದಿನಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ವತಿಯಿಂದ ಬ್ಯಾಂಕಿನ ಆಡಳಿತ ಮಂಡಲಿಯವರಿಗೆ ಹಲವಾರು ಮಾರ್ಗದರ್ಶನ, ಸೂಚನೆಗಳನ್ನು ನೀಡಿದ್ದು, ಆಡಳಿತ ಮಂಡಲಿಯ ಮೇಲೆ ಪರಿಣಾಮ ಬೀರಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಈ ಮಾರ್ಗಸೂಚಿಯ ವಿಷಯಗಳು ಆಡಳಿತ ಮಂಡಲಿಯವರ ಮೇಲೆ ಕೆಲವು ಸಂದರ್ಭಗಳಲ್ಲಿ ಹೆಚ್ಚಿನ ಪರಿಣಾಮವನ್ನುಂಟು ಮಾಡಿದ್ದು ಸತ್ಯ. ದಯಾಮಯನಾದ ಶ್ರೀ ಶಿರಡಿ ಸಾಯಿಬಾಬಾರವರ ಕೃಪೆಯಿಂದ ನಮ್ಮ ಆಡಳಿತ ಮಂಡಲಿಯ ಮೇಲೆ ಒದಗಿಬಂದ ಎಲ್ಲಾ ಕಷ್ಟಗಳನ್ನು ನಿವಾರಿಸುವ ದೆಸೆಯಲ್ಲಿ ಬಾಬಾರವರ ಆಶೀರ್ವಾದ ನಮ್ಮಗಳ ಮೇಲೆ ಇರುವುದು ಸತ್ಯ ಎಂಬುದಾಗಿ ಶೃತಪಡಿಸಲು ಬಯಸುತ್ತೇನೆ.

ಇತ್ತೀಚಿನ ದಿನಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶಗಳು ಭಾರತ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಮತ್ತು ಬ್ಯಾಂಕಿನ ವ್ಯವಹಾರಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ಕಾರ್ಯಕ್ಷೇತ್ರದಲ್ಲಿ ಹೇಗೆ ಕಾರ್ಯನಿರ್ವಹಿಸಬೇಕು ಎಂಬುದರ ಬಗ್ಗೆ ಕ್ರಿಯಾ ಯೋಜನೆಗಳನ್ನು ರೂಪಿಸಬೇಕಾಗಿರುತ್ತದೆ. ನಮ್ಮ ಬ್ಯಾಂಕಿನಲ್ಲಿ ವರ್ಷದಿಂದ ವರ್ಷಕ್ಕೆ ಗ್ರಾಹಕ ಬಂಧುಗಳು, ಸದಸ್ಯರುಗಳ ಸಂಖ್ಯೆಯು ಹೆಚ್ಚಾಗುತ್ತಿದ್ದು, ನಮ್ಮ ಬ್ಯಾಂಕಿನ ಮೇಲೆ ಅಪಾರ ವಿಶ್ವಾಸವನ್ನು ಹೊಂದಿ ಗ್ರಾಹಕರುಗಳು ತೊಡಗಿಸಿರುವ ಠೇವಣಿ ಹಣಕ್ಕೆ ಬ್ಯಾಂಕು ಆಭಾರಿಯಾಗಿದ್ದಲ್ಲದೆ ಗ್ರಾಹಕ ಬಂಧುಗಳ ಮತ್ತು ಸದಸ್ಯರುಗಳು ನಮ್ಮ ಬ್ಯಾಂಕಿನ ಮೇಲೆ ಹೊಂದಿರುವ ಅಪಾರ ಪ್ರಮಾಣದ ನಂಬಿಕೆಯನ್ನು ಉಳಿಸಿಕೊಂಡು ಹೋಗುವ ದೆಸೆಯಲ್ಲಿ ನಾವುಗಳು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗಿದೆ.

ನಾವುಗಳು ಧೈರ್ಯವಾಗಿ ಪ್ರಾಮಾಣಿಕವಾಗಿ ಆತ್ಮವಿಶ್ವಾಸದಿಂದ ಹಾಗೂ ನಿಮ್ಮೆಲ್ಲರ ಸಹಕಾರದಿಂದ ಕಟ್ಟಿ ಬೆಳೆಸಿದ ಈ ಸಂಸ್ಥೆಯು ಚಿರಸ್ಥಾಯಿಯಾಗಿ ಬೇರೂರಿ ಬೆಳೆಯಬೇಕೆಂಬುದೇ ನನ್ನ ಜೀವನದ ಮಹತ್ವಾಕಾಂಕ್ಷೆಯಾಗಿರುತ್ತದೆ. ಈ ದೆಸೆಯಲ್ಲಿ ನಮ್ಮ ಬ್ಯಾಂಕು ಹೊಂದಿರುವ ಸದಸ್ಯರುಗಳ ಹಾಗೂ ಗ್ರಾಹಕರುಗಳ ಸಮಕ್ಷಮದಲ್ಲಿ ಒಂದು ಸಮಿತಿಯನ್ನು ರಚಿಸಿ ಆ ಸಮಿತಿಯಲ್ಲಿ ಸುದೀರ್ಘವಾಗಿ ಚರ್ಚಿಸಿ ಬ್ಯಾಂಕಿನ ಆರ್ಥಿಕ ಚಟುವಟಿಕೆಗಳ ವಿಷಯಕ್ಕೆ ಸಂಬಂಧಿಸಿದಂತೆ ಮತ್ತು ಬ್ಯಾಂಕನ್ನು ಅಭಿವೃದ್ಧಿಪಡಿಸುವ ದೆಸೆಯಲ್ಲಿ ಒಂದು ವರ್ಷದ ಅವಧಿಯಲ್ಲಿ ಕನಿಷ್ಠ ಎರಡು ಸಭೆಗಳನ್ನಾದರೂ ಮಾಡಿ ಬ್ಯಾಂಕಿನ ಅಭಿವೃದ್ಧಿಗೆ ಪೂರಕವಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕೆಂಬ ಆಕಾಂಕ್ಷೆಯನ್ನು ಹೊಂದಿರುತ್ತೇನೆ. ಈ ದೆಸೆಯಲ್ಲಿ ಇಂದಿನ ಮಹಾಸಭೆಯಲ್ಲಿ ಸದಸ್ಯರುಗಳ ಸಮಕ್ಷಮದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ಸದಸ್ಯರುಗಳಿಂದ ಅಭಿಪ್ರಾಯ, ಅನುಮೋದನೆ ಪಡೆದು ಸಮಿತಿಯನ್ನು ರಚಿಸಿ, ಸಮಿತಿಯ ಸಭೆಯಲ್ಲಿ ಬ್ಯಾಂಕಿನ ಅಭಿವೃದ್ಧಿಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಮುಂದಿನ ದಿನಗಳಲ್ಲಿ ಉತ್ತಮ ಆಡಳಿತವನ್ನು ನೀಡುವ ದೆಸೆಯಲ್ಲಿ ನಾವುಗಳು ಸಾಗಬೇಕಾಗಿದೆ ಎಂಬ ಅಂಶವನ್ನು ನಿಮ್ಮ ಮುಂದೆ ಪ್ರಸ್ತುತ ಪಡಿಸಲು ಇಚ್ಛಿಸುತ್ತೇನೆ.

**ಸಹಕಾರಿ ವಂದನೆಗಳು**

(ಹೆಚ್.ಎಸ್.ಶಿವಸ್ವಾಮಿ)
**ಅಧ್ಯಕ್ಷರು**

## ಬ್ಯಾಂಕಿನ ಇತಿಹಾಸ

ಶ್ರೀ ಸೀತಾರಾಘವ ಸಹಕಾರ ಸಂಘವು 1914ರಲ್ಲಿ ಸ್ಥಾಪನೆಗೊಂಡು ಹಲವಾರು ಏರು-ಇಳಿತಗಳೊಂದಿಗೆ ಸಂಸ್ಥೆಯು 1993ರಲ್ಲಿ ಪುನಶ್ಚೇತನಗೊಂಡು ಐದು ವರ್ಷಗಳ ಕಾಲ ಪತ್ತಿನ ಸಹಕಾರ ಸಂಘವಾಗಿ ವ್ಯವಹಾರದಲ್ಲಿ ತೊಡಗಿಸಿಕೊಂಡು 1998ರಲ್ಲಿ ಸಹಕಾರ ಬ್ಯಾಂಕ್ ಆಗಿ ಪರಿವರ್ತನೆಗೊಂಡು, 2001ರಿಂದ ಸೌಹಾರ್ದ ಸಹಕಾರ ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲೆಯಲ್ಲಿ ಹೆಚ್ಚಿನ ಅವಧಿಯ ಬ್ಯಾಂಕಿಂಗ್ ಸೇವೆ ನೀಡುತ್ತಿರುವ ಬ್ಯಾಂಕ್ ಆಗಿರುತ್ತದೆ, ದಿನಾಂಕ 20-11-2014 ರಂದು 61ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭವು ಬೆಳಗಾವಿ ನಗರದ ಗಾಂಧಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಘನತೆವೆತ್ತ ರಾಜ್ಯಪಾಲರಿಂದ "ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ"ಯನ್ನು ಪಡೆಯಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಂತ್ರಣಕ್ಕೆ ಒಳಪಟ್ಟು ಸೌಹಾರ್ದ ಸಹಕಾರ ಬ್ಯಾಂಕ್ ಆಗಿ ಸೇವೆ ಸಲ್ಲಿಸುತ್ತಿದೆ.

## ಶಾಖೆಗಳು

ನಮ್ಮ ಬ್ಯಾಂಕಿನ ಪ್ರಥಮ ಶಾಖೆಯು ಚಿಕ್ಕಮಗಳೂರು ಜಿಲ್ಲೆ ಕಡೂರು ನಗರದಲ್ಲಿ ದಿನಾಂಕ : 20-09-2010ರಂದು ಪ್ರಾರಂಭಗೊಂಡು, ಕಡೂರು ನಗರ ಹಾಗೂ ತಾಲ್ಲೂಕಿನ ಜನತೆಯ ಸಹಕಾರದಿಂದ ಶಾಖೆಯ ವ್ಯವಹಾರ, ವಹಿವಾಟು, ಪ್ರಗತಿದಾಯಕವಾಗಿ ಸಾಗುತ್ತಿದ್ದು, ದಿನಾಂಕ 09-08-2019 ರಂದು ಬ್ಯಾಂಕಿನ ಕಡೂರು ಶಾಖೆಯ ವ್ಯವಹಾರವನ್ನು ಕಡೂರು ನಗರದ ಕೆ.ವಿ. ಬಡಾವಣೆಯಲ್ಲಿ ನೂತನವಾಗಿ ನಿರ್ಮಾಣಗೊಳಿಸಿ ಕೊಂಡಿರುವ ಸುಸಜ್ಜಿತವಾದ ಭವ್ಯ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಅಲ್ಲಿನ ಗ್ರಾಹಕರು ಹಾಗೂ ಸದಸ್ಯರುಗಳ ಆರ್ಥಿಕ ವ್ಯವಹಾರಗಳಿಗೆ ಸ್ಪಂದಿಸಿ ಉತ್ತಮ ಬ್ಯಾಂಕಿಂಗ್ ಸೇವೆ ಸಲ್ಲಿಸುತ್ತಾ ಕಾರ್ಯನಿರ್ವಹಿಸುತ್ತಿದೆ.ನಮ್ಮ ಬ್ಯಾಂಕಿನ 2ನೇ ಶಾಖೆಯು ಶಿವಮೊಗ್ಗ ಜಿಲ್ಲೆ ಭದ್ರಾವತಿ ನಗರದಲ್ಲಿ ದಿನಾಂಕ : 28-02-2013ರಂದು ಪ್ರಾರಂಭಗೊಂಡು, ಭದ್ರಾವತಿ ನಗರ ಹಾಗೂ ತಾಲ್ಲೂಕಿನ ಜನತೆಯ ಸಹಾಕಾರದಿಂದ ಶಾಖೆಯ ವ್ಯವಹಾರ ವಹಿವಾಟು ಪ್ರಗತಿದಾಯಕವಾಗಿ ಅಲ್ಲಿನ ಗ್ರಾಹಕರು ಹಾಗೂ ಸದಸ್ಯರುಗಳ ಆರ್ಥಿಕ ವ್ಯವಹಾರಗಳಿಗೆ ಸ್ಪಂದಿಸಿ ಉತ್ತಮ ಬ್ಯಾಂಕಿಂಗ್ ಸೇವೆ ಸಲ್ಲಿಸಲು ಸಹಕರಿಸುತ್ತಿದ್ದಾರೆ ಮತ್ತು ದಿನಾಂಕ 30-05-2019 ರಂದು ಭದ್ರಾವತಿ ನಗರದ ಭೂತನಗುಡಿ ಬಡಾವಣೆಯಲ್ಲಿರುವ ನೂತನ ಕಟ್ಟಡಕ್ಕೆ ಭದ್ರಾವತಿ ಶಾಖೆಯ ವ್ಯವಹಾರವನ್ನು ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

ನಮ್ಮ ಬ್ಯಾಂಕಿನ 3ನೇ ಶಾಖೆಯು ಶತಮಾನೋತ್ಸವ ಸ್ಮರಣೀಯ ಶಾಖೆಯಾಗಿ ಬೆಂಗಳೂರು ನಗರದ ರಾಜಾಜಿನಗರ, 6ನೇ ಬ್ಲಾಕ್, ಡಾ|| ರಾಜ್‌ಕುಮಾರ್ ರಸ್ತೆಯಲ್ಲಿ ಸ್ವಂತ ಕಟ್ಟಡದಲ್ಲಿ ದಿನಾಂಕ 14-09-2016 ರಂದು ಪ್ರಾರಂಭಗೊಂಡಿದ್ದು, ಈ ನೂತನ ಶಾಖೆಯ ವ್ಯವಹಾರ ವಹಿವಾಟು ನಡೆಯಲು ಪ್ರೋತ್ಸಾಹಿಸುತ್ತಿರುವ ಎಲ್ಲಾ ಗ್ರಾಹಕರು ಮತ್ತು ಸದಸ್ಯರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

## ಸದಸ್ಯತ್ವ

ಬ್ಯಾಂಕಿನ ವರ್ಷದ ಪ್ರಾರಂಭದಲ್ಲಿ ನಮ್ಮ ಬ್ಯಾಂಕಿನ ಸದಸ್ಯರ ಸಂಖ್ಯೆ : 2397 ಇದ್ದು, 2025-26ನೇ ಸಾಲಿನಲ್ಲಿ 54 ಜನ ಸದಸ್ಯರುಗಳು ಹೊಸದಾಗಿ ನೊಂದಣಿಯಾಗಿದ್ದು, 108 ಜನ ಸದಸ್ಯತ್ವವನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ.ವರ್ಷದ ಅಂತ್ಯಕ್ಕೆ ಇದ್ದ ಒಟ್ಟು ಸದಸ್ಯರ ಸಂಖ್ಯೆ : 2343 ಆಗಿರುತ್ತದೆ.

## ಷೇರು ಬಂಡವಾಳ

ವರ್ಷದ ಆರಂಭದಲ್ಲಿ ಷೇರು ಬಂಡವಾಳ ರೂ, 683.38 ಲಕ್ಷಗಳಿದ್ದು, ಈ ವರ್ಷದ ಅಂತ್ಯಕ್ಕೆ ರೂ. 680.47 ಲಕ್ಷಗಳಾಗಿರುತ್ತದೆ.

## ಆಪದ್ಧನ ಮತ್ತು ಇತರೆ ನಿಧಿಗಳು

ವರದಿ ಸಾಲಿನ ಆರಂಭದಲ್ಲಿ ಆಪದ್ಧನ ಹಾಗೂ ಇತರೆ ನಿಧಿಯು ರೂ.1247.90 ಲಕ್ಷಗಳಿದ್ದು, ಪ್ರಸ್ತುತ ಸಾಲಿನ ಅಂತ್ಯಕ್ಕೆ ರೂ. 1319.09 ಲಕ್ಷಗಳಾಗಿರುತ್ತದೆ. ಈ ನಿಧಿಗಳು ಬ್ಯಾಂಕಿನ ಭದ್ರತೆಯ ಸಂಕೇತವನ್ನು ಬಿಂಬಿಸುತ್ತದೆ.

## ಠೇವಣಿಗಳು

ವರದಿ ಸಾಲಿನಲ್ಲಿ ಬ್ಯಾಂಕು ಠೇವಣಿ ಸಂಗ್ರಹಣೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದು, ವರ್ಷದ ಪ್ರಾರಂಭದಲ್ಲಿ ಬ್ಯಾಂಕಿನ ಠೇವಣಿಯು ರೂ. 17072.34 ಲಕ್ಷಗಳಿದ್ದು, ದಿನಾಂಕ : 31-03-2026ರ ಅಂತ್ಯಕ್ಕೆ ರೂ. 19181.77 ಲಕ್ಷಗಳಾಗಿರುತ್ತದೆ. ಠೇವಣಿ ಸಂಗ್ರಹಣೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಶೇ. 12.36 ಉತ್ತಮ ಪ್ರಗತಿಯನ್ನು ಸಾಧಿಸಿದೆ. ಈ ದಿಸೆಯಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯು ಹಾಕಿಕೊಂಡ ಗುರಿಯನ್ನು ಸಾಧಿಸುವಲ್ಲಿ ಠೇವಣಿದಾರರು ಬ್ಯಾಂಕಿನ ಮೇಲೆ ಇಟ್ಟಿರುವ ವಿಶ್ವಾಸ, ಅಭಿಮಾನ ಹಾಗೂ ನೀಡಿದ ಸಹಕಾರದಿಂದ ನಿಶ್ಚಿತ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿದೆ.

## ಠೇವಣಿ ವಿಮೆ

ಬ್ಯಾಂಕಿನ ಠೇವಣಿಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣದಲ್ಲಿರುವ ಠೇವಣಿ ವಿಮಾ ನಿಗಮದಲ್ಲಿ ಪ್ರೀಮಿಯಂ ಹಣವನ್ನು ಪಾವತಿಸುತ್ತಿದ್ದು, ಇದರಿಂದ ಠೇವಣಿದಾರರು ತೊಡಗಿಸುವ ಠೇವಣಿಗಳಿಗೆ ಐದು ಲಕ್ಷ ರೂಪಾಯಿಗಳವರೆಗಿನ ವಿಮೆ ಸುರಕ್ಷತೆಯಿರುತ್ತದೆ.

## ದುಡಿಯುವ ಬಂಡವಾಳ

ಕಳೆದ 2024-25ರ ಅಂತ್ಯಕ್ಕೆ ದುಡಿಯುವ ಬಂಡವಾಳವು ರೂ. 19003.63 ಲಕ್ಷಗಳಿದ್ದು, ಪ್ರಸ್ತುತ ಸಾಲಿನ ಅಂತ್ಯಕ್ಕೆ ರೂ.21181.34 ಲಕ್ಷಗಳಾಗಿರುತ್ತದೆ. ಶೇ. 11.46 ರಷ್ಟು ಗಮನಾರ್ಹ ಪ್ರಗತಿಯಾಗಿದೆ.

## ಸಾಲ ಮತ್ತು ಮುಂಗಡಗಳು

ಬ್ಯಾಂಕಿನ ಸದಸ್ಯರಿಗೆ ಅವರ ಅಗತ್ಯತೆಗೆ ಹಾಗೂ ನಿಯಮಗಳ ವ್ಯಾಪ್ತಿಯೊಳಗೆ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಕಳೆದ 2024-25ರ ಅಂತ್ಯಕ್ಕೆ ಸಾಲ ನೀಡಿಕೆಯು ರೂ. 11622.30 ಲಕ್ಷಗಳಿದ್ದು, ವರದಿ ಸಾಲಿನ ಅಂತ್ಯಕ್ಕೆ ರೂ. 12031.28 ಲಕ್ಷಗಳಾಗಿರುತ್ತದೆ.

## ಆದ್ಯತಾ ವಲಯ ಹಾಗೂ ದುರ್ಬಲ ವರ್ಗದ ಸಾಲ

ಜನಸಾಮಾನ್ಯರ ಬಗ್ಗೆ ಸಾಮಾಜಿಕ ಕಳಕಳಿಯನ್ನು ಹೊಂದಿರುವ ನಮ್ಮ ಬ್ಯಾಂಕ್ ವರದಿ ಸಾಲಿನ ಅಂತ್ಯಕ್ಕೆ ನೀಡಿದ ಒಟ್ಟು ಸಾಲ ರೂ. 12031.28 ಲಕ್ಷಗಳು, ಇದರಲ್ಲಿ ರೂ. 11487.38 ಲಕ್ಷಗಳ ಸಾಲವನ್ನು ಆದ್ಯತಾ ವಲಯಕ್ಕೆ ನೀಡಿದ್ದು, ಒಟ್ಟು ಸಾಲದ ಶೇ. 95.48% ಆಗಿರುತ್ತದೆ. ದುರ್ಬಲ ವರ್ಗಕ್ಕೆ ರೂ. 1743.33 ಲಕ್ಷಗಳ ಸಾಲ ನೀಡಿದ್ದು, ಮಹಿಳಾ ವರ್ಗಕ್ಕೆ ರೂ 2016.46 ಲಕ್ಷಗಳ ಸಾಲ ನೀಡಲಾಗಿರುತ್ತದೆ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವರ್ಗಕ್ಕೆ ರೂ. 1258.47 ಲಕ್ಷಗಳು ಸಾಲ ನೀಡಲಾಗಿರುತ್ತದೆ.

## ವಸೂಲಾತಿ

ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಒಟ್ಟಾರೆ ಶ್ರಮಿಸಿದ ಫಲವಾಗಿ ಶೇ. 98.19% ರಷ್ಟು ಸಾಲ ವಸೂಲಾತಿಯಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿರುತ್ತದೆ. ಸದಸ್ಯರಲ್ಲಿ ಕಳಕಳಿಯ ಮನವಿ ಏನೆಂದರೆ ನಿಮ್ಮ ಸಾಲದ ಅಗತ್ಯಗಳನ್ನು ಪೂರೈಸಲು ಬ್ಯಾಂಕ್ ಸದಾ ಸಿದ್ದವಾಗಿದೆ. ಆದರೆ ಸಾಲ ಪಡೆದವರು ದಯವಿಟ್ಟು ಯಾವ ಕಾರಣಕ್ಕೂ ಸುಸ್ತಿದಾರರಾಗಬೇಡಿ. ಒಂದು ವೇಳೆ ಸುಸ್ತಿದಾರರಾದಲ್ಲಿ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಸಾಲ ವಸೂಲಾತಿಗೆ ಕ್ರಮ ತೆಗೆದುಕೊಳ್ಳುವುದು ಬ್ಯಾಂಕಿನ ಹಿತದೃಷ್ಟಿಯಿಂದ ಆದ್ಯ ಕರ್ತವ್ಯವಾಗಿರುತ್ತದೆ. ಸುಸ್ತಿ ಸಾಲಗಳನ್ನು ಕಡಿಮೆ ಮಾಡಲು ಪರಿಣಾಮಕಾರಿಯಾದ ಕ್ರಮ ಕೈಗೊಳ್ಳಲಾಗುವುದು ಹಾಗೂ ಸುಸ್ತಿ ಸಾಲಗಾರರ ಸಾಲ ವಸೂಲಾತಿಗಾಗಿ ವಿವಿಧ ನ್ಯಾಯಾಲಯಗಳಲ್ಲಿ ಧಾವಾ ಕ್ರಮ ಕೈಗೊಂಡಿರುತ್ತೇವೆ.

## ಅನುತ್ಪಾದಕ ಆಸ್ತಿಗಳು (ಎನ್. ಪಿ. ಎ)

ಯಾವುದೇ ಬ್ಯಾಂಕಿನ ಉತ್ತಮ ಸ್ಥಿತಿಯನ್ನು ತಿಳಿಯಲು ಅದರ ಅನುತ್ಪಾದಕ ಆಸ್ತಿಯು ಮಾನದಂಡವಾಗಿದೆ. ಈ ವರ್ಷ ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿಯು (ಎನ್.ಪಿ.ಎ) ಶೇ. 0.00 ಆಗಿರುತ್ತದೆ. ಆರ್ಥಿಕ ಸಂಕಷ್ಟದ ಸ್ಥಿತಿಯಲ್ಲಿಯೂ ಈ ಸಾಧನೆಗಳಿಸಲು ಪ್ರಮುಖವಾಗಿ ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರ ಪರಿಶ್ರಮ ಪ್ರಮುಖವಾಗಿರುತ್ತದೆ.

## ಹೂಡಿಕೆಗಳು

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಿಗೆ ಅನುಗುಣವಾಗಿ ಹೂಡಿಕೆಗಳನ್ನು ಮಾಡಲಾಗಿದೆ. ವರದಿ ಸಾಲಿನಲ್ಲಿ ಹೂಡಿಕೆಗಳ ಮೊತ್ತ ರೂ. 5991.17 ಲಕ್ಷಗಳಾಗಿದ್ದು. ಇದರಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಭದ್ರತೆಗಳಲ್ಲಿ ರೂ.5046.81 ಲಕ್ಷಗಳು ಹೂಡಿಕೆಯಾಗಿರುತ್ತದೆ. ನಗದು ಮೀಸಲು (ಸಿ.ಆರ್.ಆರ್) ಮತ್ತು ಶಾಸನ ಬದ್ಧ (ಎಸ್.ಎಲ್.ಆರ್) ಗಳನ್ನು ಬ್ಯಾಂಕ್ ಭಾರತೀಯ ರಿಸರ್ವ್ ಬ್ಯಾಂಕ್ ನೀತಿ ನಿಯಮದನ್ವಯ ಹೂಡಿಕೆ ಮಾಡಿರುತ್ತದೆ.

## ಲಾಭ ವಿಂಗಡಣೆ

ಪ್ರಸ್ತುತ ವರ್ಷ ಬ್ಯಾಂಕ್ ರೂ. 2,38,93,355.00 ಗಳ ಲಾಭ ಗಳಿಸಿದ್ದು ಇದರಲ್ಲಿ ರೂ. 72.99,307.00 ಗಳಷ್ಟು ಆದಾಯ ತೆರಿಗೆಗೆ ಅವಕಾಶ ಕಲ್ಪಿಸಿದ್ದು, ಡೆಫರ್ ಟ್ಯಾಕ್ಸ್ ರೂ. 2,50,737.00 , ಅಮಟೈಸೇಷನ್‌ಗೆ ರೂ 11,04,432.00 ಹಾಗೂ ರೂ. 3,49,000.00 ಗಳನ್ನು ಎನ್‌ಪಿಎ ಗೆ ಅವಕಾಶ ಕಲ್ಪಿಸಿ ನಿವ್ವಳ ರೂ. 1,48,89,879.00 ಗಳ ಲಾಭ ಗಳಿಸಿದೆ. ಪ್ರಸ್ತುತ ಸಾಲಿನ ನಿವ್ವಳ ಲಾಭವನ್ನು **ಈ ಕೆಳಗಿನಂತೆ ವಿಂಗಡನೆ ಮಾಡಲು ತಮ್ಮಗಳ ಅನುಮೋದನೆ ಕೋರುತ್ತೇನೆ.**

| ಕ್ರ.ಸಂ. | ವಿವರ | ಮೊಬಲಗು | ಲಾಭ ಹಂಚಿಕೆಯ ನಂತರದ ನಿಧಿಗಳ ಮೊತ್ತ ದಿನಾಂಕ: 24.06.2026 ಕ್ಕೆ ಇದ್ದಂತೆ |
|---|---|---|---|
| 1 | ಮೀಸಲು ನಿಧಿ | 3722470.00 | 59203491.28 |
| 2 | ಸಹಕಾರ ಶಿಕ್ಷಣ ನಿಧಿ | 297798.00 | 297798.00 |
| 3 | ಕಟ್ಟಡ ನಿಧಿ | 1488988.00 | 20536092.73 |
| 4 | ಸಾಮಾನ್ಯ ಕ್ಷೇಮ ನಿಧಿ | 744494.00 | 4487382.00 |
| 5 | ಸಿಬ್ಬಂದಿ ಕ್ಷೇಮ ನಿಧಿ | 744494.00 | 965343.00 |
| 6 | ಸದಸ್ಯರುಗಳಿಗೆ ಷೇರು ಡಿವಿಡೆಂಡ್ | 6452565.00 | 6932589.00 |
| 7 | ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ ನಿಧಿ | 1239070.38 | 2740137.26 |
| 8 | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 200000.00 | 344923.13 |
| | ಒಟ್ಟು ಮೊತ್ತ ರೂ. | 14889879.38 | 95507756.40 |

ಬ್ಯಾಂಕ್ ಗಳಿಸಿದ ಲಾಭಾಂಶವನ್ನು ಘೋಷಿಸಿದ ದಿನಾಂಕದಿಂದ 3 ವರ್ಷಗಳೊಳಗಾಗಿ ಡಿವಿಡೆಂಡ್‌ನ್ನು ಪಡೆದುಕೊಳ್ಳತಕ್ಕದ್ದು. ನಿಗದಿತ ಅವಧಿಯಲ್ಲಿ ಡಿವಿಡೆಂಡ್ ಪಡೆದುಕೊಳ್ಳದಿದ್ದಲ್ಲಿ ಅಂತಹ ಡಿವಿಡೆಂಡ್ ಮೊಬಲಗನ್ನು ಬ್ಯಾಂಕಿನ ಮೀಸಲು ನಿಧಿಗೆ ವರ್ಗಾಯಿಸಲಾಗುವುದು.

## ಲೆಕ್ಕ ಪರಿಶೋಧನೆ

2025–26ನೇ ಸಾಲಿನ ಲೆಕ್ಕಪತ್ರಗಳನ್ನು ಶ್ರೀ ಬಿ.ಪಿ ಪಾಟೀಲ್ & ಕೊ. ಚಾರ್ಟರ್ಡ್ ಅಕೌಂಟೆಂಟ್ಸ್, ಹಾವೇರಿ ಇವರಿಂದ ಶಾಸನಬದ್ಧ ಲೆಕ್ಕಪರಿಶೋಧನೆ ಆಗಿದ್ದು, ಬ್ಯಾಂಕ್ 'ಎ' ವರ್ಗದ ಆಡಿಟ್ ಶ್ರೇಣಿಯಲ್ಲಿ ಮುಂದುವರೆದಿರುತ್ತದೆ. ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧನೆ / ಕನ್‌ಕರೆಂಟ್ ಆಡಿಟ್ ಕಾರ್ಯವನ್ನು ಶ್ರೀ ಕಾರ್ತಿಕ್.ಪಿ ಆಂಡ್ ಕೋ, ಚಾರ್ಟರ್ಡ್ ಅಕೌಂಟೆಂಟ್ಸ್, ಚಿತ್ರದುರ್ಗ ಇವರು ನಿರ್ವಹಿಸಿರುತ್ತಾರೆ.

## ಪರಿವೀಕ್ಷಣೆ

ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳು ದಿನಾಂಕ:31–03–2024ರ ವರೆಗಿನ ಲೆಕ್ಕಪತ್ರಗಳನ್ನು ಪರಿಶೀಲಿಸಿದ್ದು ಉತ್ತಮ ಕಾರ್ಯನಿರ್ವಹಣೆಯನ್ನು ಮನಗಂಡು ನಮ್ಮ ಬ್ಯಾಂಕನ್ನು ಉತ್ತಮ ಶ್ರೇಣಿಯೆಂದು ಪರಿಗಣಿಸಿರುತ್ತಾರೆಂದು ತಿಳಿಸಲು ಹರ್ಷವೆನಿಸುತ್ತಿದೆ.

## ನಿರ್ದೇಶಕರ ಮಂಡಲಿ ಸಭೆಗಳು

ಆಡಳಿತ ಮಂಡಲಿ ನಿಯಮಿತವಾಗಿ ಪ್ರತಿ ಮಾಸಿಕ ಸಭೆ ಸೇರಿ ಪ್ರಸ್ತುತ ವಾರ್ಷಿಕದಲ್ಲಿ 14 ಸಭೆಗಳನ್ನು ನಡೆಸಿರುತ್ತದೆ. ಬ್ಯಾಂಕಿನ ಕಾರ್ಯಕಲಾಪಗಳು ಸುಗಮವಾಗಿ ನಡೆಸಲು ತಮ್ಮ ಅನುಭವ ಹಾಗೂ ಸಮಯವನ್ನು ಎಲ್ಲ ನಿರ್ದೇಶಕರು ನೀಡಿದ್ದಾರೆ. ಈ ಅವಧಿಯಲ್ಲಿ ನಮ್ಮೊಂದಿಗೆ ಆಡಳಿತ ಮಂಡಲಿಯ ಸಭೆಗಳಲ್ಲಿ ತಮ್ಮ ಉತ್ತಮ ಸಲಹೆಗಳು ಹಾಗೂ ಸೂಚನೆಗಳನ್ನು ನೀಡುತ್ತಿರುವ, ಶ್ರೀ ಎಸ್.ಮೋಹನ್ ಚಾರ್ಟರ್ಡ್ ಅಕೌಂಟೆಂಟ್ ಹಾಗೂ ಬ್ಯಾಂಕಿಂಗ್ ವಿಷಯದಲ್ಲಿ ಅನುಭವಿಗಳಾದ ಬ್ಯಾಂಕಿನ ನಿರ್ದೇಶಕರಾದ ಶ್ರೀಮತಿ ನಾಗಲಾಂಬಿಕಾ ಕಲ್ಮಠ್ ನಿವೃತ್ತ ಬ್ಯಾಂಕ್ ವ್ಯವಸ್ಥಾಪಕರವರಿಗೂ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದ ಎಲ್ಲಾ ನಿರ್ದೇಶಕರುಗಳಿಗೂ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳು.

## ಉಪ ಸಮಿತಿಗಳು :–

1) ಬ್ಯಾಂಕ್ ಕಾರ್ಯನಿರ್ವಹಣಾ ಸಮಿತಿ–04, ಲೆಕ್ಕ ಪರಿವೀಕ್ಷಣಾ ಸಮಿತಿ–11, ಸಾಲ ಮಂಜೂರಾತಿ ಸಮಿತಿ–04 ಮತ್ತು ಆಲ್ಕೋ ಕಮಿಟಿ–04, ವಿಶೇಷ ಸಮಿತಿ–02 ಸಭೆಗಳನ್ನು ನಡೆಸಿ ಬ್ಯಾಂಕಿನ ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸಿರುತ್ತದೆ. ಆಂತರಿಕ ಲೆಕ್ಕ ಪರಿಶೋಧನೆ ವಿವರಗಳನ್ನು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಿರುತ್ತದೆ. ಇದೇ ರೀತಿ ಪ್ರಸ್ತುತ ಸಾಲಿನಲ್ಲಿ ಮಂಜೂರಾತಿ ಸಮಿತಿ ಸಭೆಗಳನ್ನು ನಡೆಸಿ ಸಾಲಗಳನ್ನು ಶೀಘ್ರವಾಗಿ ವಿತರಿಸುವ ಕ್ರಮ ಕೈಗೊಳ್ಳಲಾಗಿರುತ್ತದೆ ಮತ್ತು ಆಲ್ಕೋ ಕಮಿಟಿಯ ಸಭೆಗಳನ್ನು ನಡೆಸಿ ಬ್ಯಾಂಕಿನ ನಿಧಿಗಳ ಲಭ್ಯತೆಗೆ ಅನುಗುಣವಾಗಿ ಹೂಡಿಕೆಗಳಲ್ಲಿ ವಿನಿಯೋಗಿಸುವ ಬಗ್ಗೆ ಸಕಾಲದಲ್ಲಿ ಸೂಕ್ತ ನಿರ್ಣಯ ಕೈಗೊಂಡು ನಿಧಿಗಳ ಬಗ್ಗೆ ನಿರ್ವಹಣೆ ಕಾರ್ಯ ಕೈಗೊಂಡಿರುತ್ತದೆ ವಿಶೇಷ ಸಮಿತಿ ಸಭೆಗಳನ್ನು ನಡೆಸಿ ನಿರ್ಣಯ ಕೈಗೊಂಡಿರುತ್ತೇವೆ. ಮತ್ತು ಕಾರ್ಯನಿರ್ವಹಣಾ ಸಮಿತಿಯ ಸಭೆಯಲ್ಲಿ ಶ್ರೀ ನಾಗರಾಜ ಶಾಸ್ತ್ರೀ ಕುರ್ತಕೋಟಿ ನಿವೃತ್ತ ಹಿರಿಯ ವ್ಯವಸ್ಥಾಪಕರು, ಎಸ್‌ಬಿಎಮ್, ಶ್ರೀ ರಮೇಶ್.ಪಿ.ವಿ, ನಿವೃತ್ತ ಹಿರಿಯ ವ್ಯವಸ್ಥಾಪಕರು, ಐಎನ್‌ಜಿ ವೈಶ್ಯ ಬ್ಯಾಂಕ್ ಮತ್ತು ಶ್ರೀ ಪ್ರತಾಪ್ ಎನ್. ವಕೀಲರು, ಇವರು ತಮ್ಮ ಸಲಹೆ ಮಾರ್ಗದರ್ಶನ ನೀಡಿ ಬ್ಯಾಂಕಿನ ಅಭಿವೃದ್ಧಿಗೆ ಪೂರಕವಾದ ನಿರ್ಣಯಗಳನ್ನು ಕೈಗೊಂಡಿರುತ್ತಾರೆ.

## ಸಾಮಾಜಿಕ ಹಾಗೂ ಇತರೆ ಚಟುವಟಿಕೆಗಳು

ನಮ್ಮ ಸಂಸ್ಥೆಯು ಸಹಕಾರ ಬ್ಯಾಂಕ್ ಆಗಿ ಪರಿವರ್ತನೆಗೊಂಡು 27 ವರ್ಷಗಳಾಗಿದ್ದು. ಪ್ರಸ್ತುತ 28 ನೇ ವರ್ಷದ ವಾರ್ಷಿಕ ಮಹಾ ಸಭೆಯನ್ನು ಆಚರಿಸುತ್ತಿದ್ದೇವೆ. ಬ್ಯಾಂಕಿನ ಸದಸ್ಯರ ಹಾಗೂ ಸಾರ್ವಜನಿಕರ ಅಗತ್ಯವಾದ ನೀರಿನ ಸರಬರಾಜಿನ ಉಪಯೋಗಕ್ಕಾಗಿ ಉಚಿತವಾಗಿ ನೀರಿನ ಟ್ಯಾಂಕರ್‌ನ ಸೌಲಭ್ಯ ನೀಡುತ್ತಿದ್ದೇವೆ.





# ಕೃತಜ್ಞತೆಗಳು ಹಾಗೂ ಅಭಿನಂದನೆಗಳು

